32	ಡಾರ್ಸ್ ಆಟೋಮೋಬೈಲ್ ಇಂಕ್	ಯಶವಂತಪುರ
33	ಡಾರ್ಸ್ ಆಟೋಮೋಬೈಲ್ಸ್ ಪ್ರೈ ಲಿ	ವೆಂಕಟೇಶಪುರ, ಅಡುಗೊಂಡನಹಳ್ಳಿ
34	ಗುರಗೊಂಟೇಪಾಳ್ಯ	ರಿಂಗ್ ರೋಡ್
35	ಆರ್ ಒ	ಮಾಗಡಿ ರೋಡ್

1417 (1440) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) – ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಾದ್ಯಂತ ಸರ್ಕಸ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಣಿಗಳ ಸಂಖ್ಯೆ ಎಷ್ಟು,

ಆ) ಯಾವ ಯಾವ ಜಾತಿಯ ಪ್ರಾಣಿಗಳು ಸರ್ಕಸ್‌ನಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತವೆ,

ಇ) ಸರ್ಕಸ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಣಿಗಳ ರಕ್ಷಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಸಿ ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ರಾಜ್ಯಾದಂತ ಯಾವುದೇ ವಿಭಾಗದಲ್ಲಿ ಸರ್ಕಸ್ ಕಂಪನಿಗಳ ಯಾವುದೇ ಪ್ರಾಣಿಗಳು ಕಾರ್ಯನಿರ್ವಹಿಸುವುದಿಲ್ಲ

ಆ) ಅನ್ವಯಿಸುವುದಿಲ್ಲ

ಇ) ವನ್ಯಜೀವಿ ಸಂರಕ್ಷಣಾ ಕಾಯ್ದೆ 1972 ರಡಿಯಲ್ಲಿ (ಷೆಡ್ಯೂಲ್) ನಲ್ಲಿ ನಿರ್ಬಂಧಿಸಿರುವ ಯಾವುದೇ ಪ್ರಾಣಿಗಳನ್ನು ಸರ್ಕಸ್ಸು ಮತ್ತು ಯಾವುದೇ ಪ್ರದರ್ಶನದಲ್ಲಿ ಬಳಸುವಂತಿಲ್ಲ ಮಾನ್ಯ ಸರ್ವೋಚ್ಚ ನ್ಯಾಯಾಲಯವು 11867–11878/2000 ರಲ್ಲಿ ಅಪೀಲಿನ ಫರ್ಯಾದಿನಲ್ಲಿ, ಕರಡಿ, ಕೋತಿ, ಹುಲಿ, ಚಿರತೆ ಮತ್ತು ಸಿಂಹಗಳನ್ನು ಪ್ರದರ್ಶನಗಳಲ್ಲಿ ಉಪಯೋಗಿಸುವುದನ್ನು ನಿರ್ಬಂಧಿಸಿರುತ್ತದೆ ಹಾಗಾಗಿ ರಾಜ್ಯದ

ಸರ್ಕಸ್‌ನಲ್ಲಿದ್ದ ಎಲ್ಲಾ ಪ್ರಾಣಿಗಳನ್ನು ಇಲಾಖೆಯು, ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಸ್ವಾಧೀನಪಡಿಸಿಕೊಂಡಿದ್ದು, ಬನ್ನೇರುಘಟ್ಟ ಬಯೋಪಾರ್ಕ್‌ನಲ್ಲಿ ಇಡಲಾಗಿದೆ

1418 (1441) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) – ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದುಳಿದ ಗಡಿ ಪ್ರದೇಶವಾದ ಚಾಮರಾಜನಗರ ಜಿಲ್ಲೆಯೂ ಸೇರಿದಂತೆ ರಾಜ್ಯದ್ಯಂತ ಇರುವ ಸಣ್ಣ ಕೆರೆಗಳ ಸಂಖ್ಯೆ ಎಷ್ಟು,

ಆ) ಈ ಕೆರೆಗಳ ಹೂಳೆತ್ತಲು ಸರ್ಕಾರ ಕೈಗೊಂಡ ಕ್ರಮಗಳೇನು,

ಇ) ಚಾಮರಾಜನಗರ ಜಿಲ್ಲೆಯಲ್ಲಿ ಯಾವ ಯಾವ ಸ್ಥಳಗಳಲ್ಲಿ ಸಣ್ಣ ಕೆರೆಗಳಿರುತ್ತವೆ,

ಈ) ಇವುಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಬಿ ಎಸ್ ಯಡಿಯೂರಪ್ಪ (ಮಾನ್ಯ ಉಪ ಮುಖ್ಯ ಮಂತ್ರಿಗಳು)

ಅ) ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 3396 ಕೆರೆಗಳಿವೆ

ಆ) ಅನುದಾನದ ಲಭ್ಯತೆಗನುಸಾರವಾಗಿ ಕೆರೆಗಳ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲಾಗುತ್ತಿತ್ತು ಈ ವರ್ಷದ ಫೆಬ್ರುವರಿ ಅಂತ್ಯಕ್ಕೆ ಸಣ್ಣ ನೀರಾವರಿ ಕೆರೆಗಳ ಹೂಳೆತ್ತುವ ಅಂಶವೂ ಸೇರಿದಂತೆ ಅಭಿವೃದ್ಧಿಗಾಗಿ ಒಟ್ಟು ರೂ 6002 67 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ ಇದರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ಗುಲ್ಬರ್ಗಾ ಜಿಲ್ಲೆಗಳಲ್ಲಿ ಭಾರತ ಸರ್ಕಾರದ ಪುರಸ್ಕೃತ ಪೈಲಟ್ ಯೋಜನೆಯಡಿ 299 ಕೆರೆಗಳ ಸಮಗ್ರ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ ಇದಲ್ಲದೆ, ಜಲಸಂವರ್ಧನೆ ಯೋಜನಾ ಸಂಘವು ಕೈಗೆತ್ತಿಕೊಳ್ಳುತ್ತಿರುವ ಕಾರ್ಯಕ್ರಮದಡಿ